ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: M/s Sarjan Realities Limited ಕಂಪನಿಗೆ ದಾವಣಗೆರೆ ಜಿಲ್ಲೆ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿದ್ದ 45.9 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 56.7 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸುವುದು ಮತ್ತು ಮೂಲ ಯೋಜನೆಯ ಅನುಷ್ಠಾನಕ್ಕೆ ದಿನಾಂಕ :23.06.2016 ರಿಂದ 22.06.2017 ರವರೆಗೆ ಕಾಲಾವಕಾಶ ವಿಸ್ತರಿಸುವ ಕುರಿತು.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಇಎನ್ 60 ಎನ್‌ಸಿಇ 2005 ದಿನಾಂಕ:22.03.2005.
2) ಸರ್ಕಾರದ ಆದೇಶ ಸಂಖ್ಯೆ: ಇಎನ್ 246 ಎನ್‌ಸಿಇ 2010 ದಿನಾಂಕ:15.02.2011.
3) ಸರ್ಕಾರದ ಆದೇಶ ಸಂಖ್ಯೆ: ಇಎನ್ 44 ಎನ್‌ಸಿಇ 2016 ದಿನಾಂಕ:11.03.2016.
4) ಸರ್ಕಾರದ ಆದೇಶ ಸಂಖ್ಯೆ: ಇಎನ್ 45 ಎನ್‌ಸಿಇ 2016 ದಿನಾಂಕ:11.03.2016.
5) ಸರ್ಕಾರದ ಆದೇಶ ಸಂಖ್ಯೆ: ಇಎನ್ 46 ಎನ್‌ಸಿಇ 2016 ದಿನಾಂಕ:11.03.2016.
6) ಸರ್ಕಾರದ ಆದೇಶ ಸಂಖ್ಯೆ: ಇಎನ್ 47 ಎನ್‌ಸಿಇ 2016 ದಿನಾಂಕ:11.03.2016.
7) ಸರ್ಕಾರದ ಆದೇಶ ಸಂಖ್ಯೆ: ಇಎನ್ 48 ಎನ್‌ಸಿಇ 2016 ದಿನಾಂಕ:11.03.2016.
8) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: KRED/08/SRL/VOL-7/2010 /567-S.

* * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ M/s Sarjan Realities Limited ಕಂಪನಿಗೆ ಕರ್ನಾಟಕದ ವಿವಿಧ ಸ್ಥಳಗಳಲ್ಲಿ 34.8 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಿ ಆದೇಶಿಸಲಾಗಿತ್ತು.

M/s Sarjan Realities Limited ಕಂಪನಿಗೆ ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಹಂಚಿಕೆಯಾಗಿರುವ 34.8 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಪೈಕಿ ದಾವಣಗೆರೆ ಜಿಲ್ಲೆಯ ಮಾಚಿಹಳ್ಳಿ, ಹರಪನಹಳ್ಳಿ, ಕಂಬತ್ರಹಳ್ಳಿ ಮತ್ತು ಗುಂಡಗತ್ತಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ ಅಂಶಿಕ 4.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 45.9 ಮೆ.ವ್ಯಾ ಸಾಮರ್ಥ್ಯಕ್ಕೆ ಹಾಗೂ ದಾವಣಗೆರೆ ಜಿಲ್ಲೆಯ ಜತ್ತಿನಕಟ್ಟೆ ಗ್ರಾಮದಲ್ಲಿ ಹಂಚಿಕೆಯಾಗಿರುವ ಅಂಶಿಕ 1.2 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 31.5 ಮೆ.ವ್ಯಾ. ಸಾಮರ್ಥ್ಯಕ್ಕೆ ಅಂದರೆ, ಎರಡೂ ಯೋಜನೆಗಳು ಸೇರಿ ಒಟ್ಟು 77.4 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಲ್ಲಿ ಆದೇಶಿಸಲಾಗಿತ್ತು.

M/s Sarjan Realities Limited ಕಂಪನಿಗೆ ದಾವಣಗೆರೆ ಜಿಲ್ಲೆಯ ಮಾಚಿಹಳ್ಳಿ, ಹರಪನಹಳ್ಳಿ, ಕಂಬತ್ರಹಳ್ಳಿ ಮತ್ತು ಗುಂಡಗತ್ತಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 45.9 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (3), (4), (5), (6) ಮತ್ತು (7) ರ ಸರ್ಕಾರದ ಆದೇಶಗಳಲ್ಲಿ ಕ್ರಮವಾಗಿ 8.4 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Bharat Electronics Limited ಕಂಪನಿಗೆ, 4.2 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Hindustan Aeronautics Limited ಕಂಪನಿಗೆ, 2.1 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Hindustan Aeronautics Limited ಕಂಪನಿಗೆ,

---2)

4.2 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Bharat Petroleum Corporation Limited ಕಂಪನಿಗೆ, ಮತ್ತು 2.1 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Bharat Petroleum Corporation Limited ಕಂಪನಿಗೆ ವರ್ಗಾಯಿಸಿ ಸದರಿ ಯೋಜನೆಗಳ ಅನುಷ್ಠಾನಕ್ಕೆ ಕಾಲಾವಧಿಯನ್ನು ದಿನಾಂಕ :22.03.2011 ರಿಂದ 22.06.2016 ರವರೆಗೆ ವಿಸ್ತರಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (8) ರನ್ವಯ ಏಕ ಕಡತ ಪದ್ಧತಿಯಡಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರು M/s Sarjan Realities Limited ಕಂಪನಿಗೆ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಹಂಚಿಕೆಯಾಗಿದ್ದ 34.8 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 5.4 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದುಗೊಳಿಸಿದ್ದು, 4.8 ಮತ್ತು 1.2 ಮೆ.ವ್ಯಾ. ಸಾಮರ್ಥ್ಯದ ಅಂಶಿಕ ಯೋಜನೆಯನ್ನು ದಿನಾಂಕ:15.02.2011 ರಲ್ಲಿ 77.4 ಮೆ.ವ್ಯಾ.ಗೆ ಸಾಮರ್ಥ್ಯ ಹೆಚ್ಚಿಸಲಾಗಿದೆ ಹಾಗೂ 1.8 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಇದೆಲ್ಲವನ್ನು ಹೊರತು ಪಡಿಸಿ ಬಾಕಿ ಉಳಿದಿರುವ 22.8 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಸದರಿ ಕಂಪನಿಯು ದಿನಾಂಕ:22.03.2011 ರಿಂದ 22.06.2016 ರವರೆಗೆ ಕಾಲಾವಕಾಶ ಶುಲ್ಕವನ್ನು ಕೆ.ಆರ್.ಇ.ಡಿ.ಎಲ್‌ಗೆ ಸಂದಾಯ ಮಾಡಿರುತ್ತಾರೆ.

ಸದರಿ ಕಂಪನಿಗೆ ಹಂಚಿಕೆಯಾಗಿದ್ದ (ಸಾಮರ್ಥ್ಯ ವೃದ್ಧಿಸಿದ್ದ) ದಾವಣಗೆರೆ ಜಿಲ್ಲೆಯ ಮಾಚಿಹಳ್ಳಿ, ಹರಪನಹಳ್ಳಿ, ಕಂಬತ್ರಹಳ್ಳಿ ಮತ್ತು ಗುಂಡಗತ್ತಿ ಗ್ರಾಮಗಳಲ್ಲಿನ 45.9 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 21 ಮೆ.ವ್ಯಾ. ಸಾಮರ್ಥ್ಯವನ್ನು ದಿನಾಂಕ :31.03.2016 ರಲ್ಲಿ ಅನುಷ್ಟಾನಗೊಳಿಸಲಾಗಿದೆ.

ಇದಲ್ಲದೆ, ದಾವಣಗೆರೆ ಜಿಲ್ಲೆಯ ಮಾಚಿಹಳ್ಳಿ, ಹರಪನಹಳ್ಳಿ, ಕಂಬತ್ರಹಳ್ಳಿ ಮತ್ತು ಗುಂಡಗತ್ತಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 45.9 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು 56.7 ಮೆ.ವ್ಯಾಗೆ ಸಾಮರ್ಥ್ಯ ಹೆಚ್ಚಿಸಲು ಕೋರಿ ನಿಗಧಿತ ಶುಲ್ಕ ಪಾವತಿಸಿರುವುದಾಗಿ ತಿಳಿಸಿರುತ್ತಾರೆ.

ಅಲ್ಲದೇ ಮೂಲ ಹಂಚಿಕೆ ಆದೇಶದಲ್ಲಿ ಅನುಷ್ಠಾನಕ್ಕೆ ಬಾಕಿ ಇರುವ 22.8 ಮೆ.ವ್ಯಾ. ಸಾಮರ್ಥ್ಯದ ಯೋಜನೆಯ ಅನುಷ್ಠಾನಕ್ಕೆ ದಿನಾಂಕ:23.06.2016 ರಿಂದ 22.06.2017 ರವರೆಗೆ ಕಾಲಾವಧಿ ವಿಸ್ತರಣೆ ಕೋರಿ ನಿಗಧಿತ ಶುಲ್ಕ ಪಾವತಿಸಿರುವುದರಿಂದ, M/s Sarjan Realities Limited ಕಂಪನಿಗೆ ಮೂಲ ಹಂಚಿಕೆ ಆದೇಶದಲ್ಲಿ ಬಾಕಿ ಉಳಿದಿರುವ 22.8 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ದಿನಾಂಕ: 23.06.2016 ರಿಂದ 23.06.2017 ರವರೆಗೆ ಕಾಲಾವಕಾಶ ವಿಸ್ತರಿಸುವಂತೆ ಹಾಗೂ ಸದರಿ ಕಂಪನಿಗೆ ದಾವಣಗೆರೆ ಜಿಲ್ಲೆಯ ಮಾಚಿಹಳ್ಳಿ, ಹರಪನಹಳ್ಳಿ, ಕಂಬತ್ರಹಳ್ಳಿ ಮತ್ತು ಗುಂಡಗತ್ತಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 45.9 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 56.7 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 212 ಎನ್‌ಸಿಇ 2016,**
**ಬೆಂಗಳೂರು, ದಿನಾಂಕ:11.08.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು, M/s Sarjan Realities Limited ಕಂಪನಿಗೆ ಸರ್ಕಾರದ ಮೂಲ ಹಂಚಿಕೆ ಆದೇಶ ಸಂಖ್ಯೆ: ಇಎನ್ 60 ಎನ್‌ಸಿಇ 2005, ದಿನಾಂಕ:22.03.2005 ರಲ್ಲಿ ಹಂಚಿಕೆಯಾಗಿ ಅನುಷ್ಠಾನಕ್ಕೆ ಬಾಕಿ ಉಳಿದಿರುವ 22.8 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ದಿನಾಂಕ:23.06.2016 ರಿಂದ 22.06.2017 ರವರೆಗೆ ಕಾಲಾವಕಾಶ ವಿಸ್ತರಿಸಲಾಗಿದೆ.

--3)

ಅದೇ ರೀತಿ, ಸದರಿ ಕಂಪನಿಗೆ ಸರ್ಕಾರದ ಆದೇಶ ಸಂಖ್ಯೆ: ಇಎನ್ 246 ಎನ್‌ಸಿಇ 2010, ದಿನಾಂಕ:15.02.2011 ರಲ್ಲಿ ದಾವಣಗೆರೆ ಜಿಲ್ಲೆಯ ಮಾಚಿಹಳ್ಳಿ, ಹರಪನಹಳ್ಳಿ, ಕಂಬತ್ರಹಳ್ಳಿ ಮತ್ತು ಗುಂಡಗತ್ತಿ ಗ್ರಾಮಗಳಲ್ಲಿ ಸಾಮರ್ಥ್ಯ ವೃದ್ಧಿಸಲಾಗಿರುವ 45.9 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 56.7 ಮೆ.ವ್ಯಾ.ಗೆ ಈ ಕೆಳಗನ ಶಡ್ಯೂಲ್‌ನಲ್ಲಿ ವಿವರಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಹೆಚ್ಚಿಸಿ **ಆದೇಶಿಸಲಾಗಿದೆ.**

**Schedule**

**The Geographical area description of 56.7 Wind power project is detailed as below :-**

| Geographical Area details | Sanctioned capacity in MW | Enhancement proposed in Stage-I | Enhancement proposed in Stage-II | Total capacity including enhancement | Sy.No.& villages |
|---|---|---|---|---|---|
| A large plateau is spread across and situated between Gurusantanahalli and Kambatarahalli. The area is narrated as open scrub with 722, 677, 701 and 777m peaks. The entire area is covered in the following geographical co-ordinates:<br>Latitude: $14^{0}41'54''$-45'N<br>Longitude: $75^{0}55'$-$76^{0}$"E<br>Ridge peaks: 722, 677, 701 & 777m elevation.<br>Toposheet No. 48 N/14 | 4.8 | 41.1 MW | 10.8 | 56.7 MW | Machihalli Sy. No. 353 Harapanahalli Sy. No. 492 Kambatrahalli Sy. No. 01 and Gundagathi Sy. No. 324 |

**ಷರತ್ತುಗಳು**

1 ಸದರಿ ಕಂಪನಿಯು ಸರ್ಕಾರಿ ಆದೇಶ ಸಂಖ್ಯೆ : ಇಎನ್ 435 ಎನ್‌ಸಿಇ 2011, ದಿನಾಂಕ 06.1.2012 ರನ್ವಯ 45 ದಿನಗಳ ಒಳಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

2 M/s Sarjan Realities Limited ಕಂಪನಿಯು ಸಾಮರ್ಥ್ಯ ಹೆಚ್ಚಳಗೊಂಡ ಯೋಜನೆಗೂ ಸಹ ವಿದ್ಯುತ್ತನ್ನು ಮಾರಾಟ ಮಾಡುವ ಕುರಿತು ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆಯೇ ನಿಯಮಾನುಸಾರ ವಿದ್ಯುತ್ ಖರೀದಿ ಒಡಂಬಡಿಕೆ / ಕೆಪಿಟಿಸಿಎಲ್‌ನೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಅನುಮತಿಸಿದೆ.

3 M/s Sarjan Realities Limited ಕಂಪನಿಯು ಸರ್ಕಾರದ ಆದೇಶ ಸಂಖ್ಯೆ : ಇಎನ್ 246 ಎನ್‌ಸಿಇ 2010 ದಿನಾಂಕ : 15.02.2011 ರಲ್ಲಿ ಸಾಮರ್ಥ್ಯ ಹೆಚ್ಚಳಗೊಂಡ 77.4 ಮೆ.ವ್ಯಾ. ಸಾಮರ್ಥ್ಯಕ್ಕೂ ಸಹ ನಿಯಮಾನುಸಾರ ಕಾಲಾವಧಿ ವಿಸ್ತರಣಾ ಶುಲ್ಕವನ್ನು ಒಡಂಬಡಿಕೆ ಮಾಡಿಕೊಳ್ಳುವ ಮುನ್ನ ಕೆ.ಆರ್.ಇ.ಡಿ.ಎಲ್.ಗೆ ಪಾವತಿಸತಕ್ಕದ್ದು ಹಾಗೂ ಕೆ.ಆರ್.ಇ.ಡಿ.ಎಲ್. ಸಂಸ್ಥೆಯು ಕಾಲಾವಧಿ ವಿಸ್ತರಣೆಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದ ಅನುಮೋದನೆಯ ನಂತರ ಒಡಂಬಡಿಕೆ ಮಾಡಿಕೊಳ್ಳುವುದು.

4 ಈ ಆದೇಶವನ್ನು ರದ್ದು ಪಡಿಸುವ/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

----4)